# ನಾಗರಿಕ ಪೋಲಿಸ್ ಪೇದೆಗಳ ನೇಮಕಾತಿ ಪರೀಕ್ಷೆ-2010

## ಸಾಮಾನ್ಯ ಜ್ಞಾನ

1. 'ಅಕೌಸ್ಟಿಕ್ಸ್' ಈ ಪದವು ಕೆಳಗಿನವುಗಳಲ್ಲಿ ಯಾವುದಕ್ಕೆ ಸಂಬಂಧಿದೆ?
   ಎ. ಅಕೌಂಟ್ಸ್ ಬಿ. ಖಭೌತಶಾಸ್ತ್ರ
   ಸಿ. ಶಬ್ದ ಡಿ. ವಿದ್ಯುಚ್ಛಕ್ತಿ
2. ಯಾರಿಂದ 'ಸಾರೇ ಜಹಾಂ ಸೇ ಅಚ್ಛಾ' ಎನ್ನುವ ದೇಶಭಕ್ತಿ ಗೀತೆಯು ಬರೆಯಲ್ಪಟ್ಟಿದೆ?
   ಎ. ಪ್ರದೀಪ್ ಬಿ. ನೌಶಾದ್
   ಸಿ. ಮಹ್ಮದ್ ಇಕ್ಬಾಲ್ ಡಿ. ಭರತೇಂದು ಹರಿಶ್ಚಂದ್ರ
3. ಫತೇಪುರ ಸಿಕ್ರಿ ನಗರದ ನಿರ್ಮಾತೃ
   ಎ. ಅಕ್ಬರ್ ಬಿ. ಹುಮಾಯೂನ್
   ಸಿ. ಶಾಜಹಾನ್ ಡಿ. ಜಹಾಂಗೀರ್
4. ಸ್ಮೃತಿನಾಶ ಸ್ಮರಣೆಯ ನಾಶವನ್ನು ಸೂಚಿಸಲು ಬಳಸುವ ವೈದ್ಯಕೀಯ ಪದ
   ಎ. ಅಂಬ್ರೋಸಿಯಾ ಬಿ. ಅಮ್ನಿಸಿಯಾ
   ಸಿ. ಅನೀಮಿಯಾ ಡಿ. ಅನೆಸ್ತೇಸಿಯಾ
5. ಯಾವ ದಿನದಂದು ವಿಶ್ವ ಏಡ್ಸ್ ದಿನವನ್ನು ಆಚರಿಸಲಾಗುವುದು?
   ಎ. 8ನೇ ಅಕ್ಟೋಬರ್ ಬಿ. 2ನೇ ಏಪ್ರಿಲ್
   ಸಿ. 1ನೇ ಡಿಸೆಂಬರ್ ಡಿ. 14ನೇ ಫೆಬ್ರವರಿ
6. ಒಂದು ವೇಳೆ 10 ಸಂಖ್ಯೆಯ ವಸ್ತುಗಳ ಮೂಲ ಬೆಲೆಯು 9 ಸಂಖ್ಯೆಯ ವಸ್ತುಗಳ ಮಾರಾಟ ಬೆಲೆಗೆ ಸಮಾನವಾಗಿದ್ದಲ್ಲಿ ದೊರಕುವ ಲಾಭ
   ಎ. ಶೇ. 12 ಬಿ. ಶೇ. 10 ಸಿ. ಶೇ. $9^1/_{11}$ ಡಿ. ಶೇ. $11^1/_2$
7. ಇವರಲ್ಲಿ ಯಾರನ್ನು ಏಶಿಯಾದ ಬೆಳಕು (ಲೈಟ್ ಆಫ್ ಏಶಿಯಾ) ಎಂದು ಕರೆಯುತ್ತಾರೆ?
   ಎ. ಮದರ್ ತೆರೆಸಾ ಬಿ. ಮಹಾವೀರ
   ಸಿ. ಕನ್‌ಫ್ಯೂಶಿಯಸ್ ಡಿ. ಗೌತಮ ಬುದ್ಧ
8. ಎನ್.ಸಿ.ಇ.ಆರ್.ಟಿ. ಇದರ ವಿಸ್ತೃತ ರೂಪ
   ಎ. ನ್ಯಾಶನಲ್ ಕೌನ್ಸಿಲ್ ಆಫ್ ಎನ್‌ವೈರಾನ್‌ಮೆಂಟ್ ರಿಸರ್ಚ್ ಆ್ಯಂಡ್ ಟ್ರೈನಿಂಗ್
   ಬಿ. ನ್ಯಾಶನಲ್ ಕೌನ್ಸಿಲ್ ಆಫ್ ಎಜುಕೇಶನಲ್ ರಿಸರ್ಚ್ ಆ್ಯಂಡ್ ಟ್ರೈನಿಂಗ್
   ಸಿ. ನ್ಯಾಶನಲ್ ಕೌನ್ಸಿಲ್ ಆಫ್ ಇಕಾಲಾಜಿಕಲ್ ರಿಸರ್ಚ್ ಆ್ಯಂಡ್ ಟ್ರೈನಿಂಗ್
   ಡಿ. ನ್ಯಾಶನಲ್ ಕೌನ್ಸಿಲ್ ಆಫ್ ಎಲೆಕ್ಟ್ರಾನಿಕ್ ರಿಸರ್ಚ್ ಆ್ಯಂಡ್ ಟ್ರೈನಿಂಗ್
9. ಮೋಹನ ತರಂಗಿಣಿಯನ್ನು ರಚಿಸಿದವರು
   ಎ. ಪುರಂದರದಾಸರು ಬಿ. ಕನಕದಾಸರು
   ಸಿ. ತುಕಾರಾಮ ಡಿ. ಜಯದೇವ
10. ಇವರಲ್ಲಿ ಯಾರ ಕಾಲಘಟ್ಟಕ್ಕೆ ಮಯೂರ ಸಿಂಹಾಸಿನ ಸೇರಿದೆ?
    ಎ. ಜಹಾಂಗೀರ್ ಬಿ. ಶಾಜಹಾನ್
    ಸಿ. ಅಕ್ಬರ್ ಡಿ. ಔರಂಗಜೇಬ್
11. ಸಂಸ್ಕೃತ ಕೃತಿ 'ಲೀಲಾವತಿ' ಯಾವ ವಿಷಯಕ್ಕೆ ಸಂಬಂಧಿಸಿದೆ?
    ಎ. ತಂತ್ರಜ್ಞಾನ ಬಿ. ಗಣಿತಶಾಸ್ತ್ರ
    ಸಿ. ವಿಜ್ಞಾನ ಡಿ. ವೈದ್ಯಕೀಯ ಶಾಸ್ತ್ರ
12. ಇವರಲ್ಲಿ ಯಾರು ನಮಗೆ 'ಯೋಗ ಸೂತ್ರ'ಗಳನ್ನು ನೀಡಿದವರು?
    ಎ. ಕಣಾದ ಬಿ. ವ್ಯಾಸ ಸಿ. ಪತಂಜಲಿ ಡಿ. ಗೌತಮ
13. ಯಾವ ದಿನದಂದು ಸಾಂವಿಧಾನಿಕ ಸಭೆಯು 'ಭಾರತ ಸಂವಿಧಾನ'ವನ್ನು ಒಪ್ಪಿತು (ಅಂಗೀಕರಿಸಿತು)?
    ಎ. 15ನೇ ಆಗಸ್ಟ್ 1947 ಬಿ. 26ನೇ ಜನವರಿ 1950
    ಸಿ. 9ನೇ ಡಿಸೆಂಬರ್ 1946 ಡಿ. 26ನೇ ನವೆಂಬರ್ 1949
14. ಇವರಲ್ಲಿ ಯಾರು ಭಾರತದ ಸಾಂವಿಧಾನಿಕ ಸಭೆಯ ಅಧ್ಯಕ್ಷರಾಗಿದ್ದರು?
    ಎ. ಡಾ. ರಾಜೇಂದ್ರಪ್ರಸಾದ್ ಬಿ. ಡಾ. ಬಿ.ಆರ್. ಅಂಬೇಡ್ಕರ್
    ಸಿ. ಡಾ. ಕೆ.ಎಂ. ಮುನ್ಷಿ ಡಿ. ಶ್ರೀಮತಿ ಸರೋಜಿನಿ ನಾಯ್ಡು
15. ಇವುಗಳಲ್ಲಿ ಯಾವ ವರ್ಷದಲ್ಲಿ ಭಾರತದಲ್ಲಿ ತುರ್ತು ಪರಿಸ್ಥಿತಿಯನ್ನು ಘೋಷಿಸಲಾಗಿಲ್ಲ?
    ಎ. 1962 ಬಿ. 1967 ಸಿ. 1971 ಡಿ. 1975
16. ಒಂದು ವೇಳೆ 2x3 = 36, 5x4=400, 6x2=144, 3x3=81 ಆದ ಪಕ್ಷದಲ್ಲಿ ಇವುಗಳಲ್ಲಿ ಯಾವುದು 5x5=? ಕ್ಕೆ ಸರಿಯಾದ ಉತ್ತರವಾಗುವುದು?
    ಎ. 225 ಬಿ. 625 ಸಿ. 125 ಡಿ. 25
17. ಮರದ ವಯಸ್ಸನ್ನು ಈ ಕೆಳಗೆ ಕಾಣಿಸಿದ ಯಾವುದರಿಂದ ನಿರ್ಧರಿಸಬಹುದು?
    ಎ. ಅದರ ಎತ್ತರವನ್ನು ಅಳೆಯುವುದರಿಂದ
    ಬಿ. ಅದರ ವ್ಯಾಸವನ್ನು ಅಳೆಯುವುದರಿಂದ
    ಸಿ. ಅದರ ಒಳಗಿನ ತಿರುಳನ್ನು ವಿಶ್ಲೇಷಿಸುವುದರಿಂದ

ಡಿ. ಅದರ ಕಾಂಡದ ವಾರ್ಷಿಕ ಬೆಳವಣಿಗೆಯ ಸುತ್ತು (ಸುರುಳಿ)ಗಳನ್ನು ಎಣಿಸುವುದರಿಂದ

18. ಭಾರತದ ರಾಜ್ಯವೊಂದರ ಪ್ರಥಮ ಮಹಿಳಾ ಮುಖ್ಯಮಂತ್ರಿ ಯಾರೆಂದು ಹೆಸರಿಸಿ
ಎ. ಸುಚೇತಾ ಕೃಪಲಾನಿ ಬಿ.ಸರೋಜಿನಿ ನಾಯ್ಡು
ಸಿ. ನಂದಿನಿ ಸತ್ಪತಿ ಡಿ. ಮಾಯಾವತಿ

19. ಇವುಗಳಲ್ಲಿ ಯಾವುದನ್ನು ಭೂಕಂಪವೊಂದರ ಮೂಲ ಬಿಂದುವೆಂದು ಕರೆಯಲಾಗುತ್ತದೆ?
ಎ. ಎಪಿಸೆಂಟರ್ ಬಿ. ಸೀಸ್ಮಿಕ ಫೋಕಸ್
ಸಿ. ಕ್ವೇಕ್ ಸೆಂಟರ್ ಡಿ. ಟೆಕ್ಟೋನಿಕ್ ಪಾಯಿಂಟ್

20. ಇವುಗಳಲ್ಲಿ ಯಾವುದು ಮಂಡಲ್ ಆಯೋಗದ ವರದಿಯಲ್ಲಿ ಪ್ರಮುಖ ಶಿಫಾರಸ್ಸುಗಳಲ್ಲೊಂದಾಗಿದೆ?
ಎ. ಇತರ ಹಿಂದುಳಿದ ವರ್ಗಗಳಿಗೆ ಮೀಸಲಾತಿ
ಬಿ. ಅಲ್ಪಸಂಖ್ಯಾತರಿಗೆ ಪ್ರಾತಿನಿಧ್ಯ
ಸಿ. ಚುನಾವಣಾ ಸುಧಾರಣೆಗಳು
ಡಿ. ಶೈಕ್ಷಣಿಕ ಸುಧಾರಣೆಗಳು

21. ಒಂದು ವೇಳೆ ಎಚ್.ಕೆ.ಯು.ಜೆ ಎನ್ನುವುದು ಎಫ್.ಐ.ಎಸ್.ಎಚ್ ಎಂದಾದರೆ ಯು.ವಿ.ಸಿ.ಡಿ. ಎನ್ನುವುದು ಏನಾಗುವುದು?
ಎ. ಎಸ್.ಟಿ.ಎ.ಆರ್ ಬಿ. ಎಸ್.ಟಿ.ಎ.ಕೆ.
ಸಿ. ಎಸ್.ಟಿ.ಎ.ಎಲ್ ಡಿ. ಎಸ್.ಟಿ.ಎ.ಬಿ

22. ಭಾರತವು ಸ್ವತಂತ್ರವಾದಾಗ, ಇವರಲ್ಲಿ ಯಾರು ಬ್ರಿಟನ್ನಿನ (ಇಂಗ್ಲೆಂಡಿನ) ಪ್ರಧಾನ ಮಂತ್ರಿಯಾಗಿದ್ದವರು
ಎ. ವಿನ್‌ಸ್ಟನ್ ಚರ್ಚಿಲ್ ಬಿ. ಕ್ಲೆಮೆಂಟ್ ಆಟ್ಲೀ
ಸಿ. ಲಾರ್ಡ್ ಮೌಂಟ್‌ಬ್ಯಾಟನ್ ಡಿ. ನೆವಿಲ್ ಚೇಂಬರ್‌ಲೇನ್

23. ಆಧುನಿಕ ಜಗತ್ತಿನ ಪ್ರಥಮ ಮಹಿಳಾ ಪ್ರಧಾನ ಮಂತ್ರಿ
ಎ. ಸಿರಿಮಾವೋ ಬಂಡಾರನಾಯಕೆ ಬಿ. ಇಂದಿರಾ ಗಾಂಧಿ
ಸಿ. ಗೋಲ್ಡಾ ಮೀರ್ ಡಿ. ಮಾರ್ಗರೆಟ್ ಥ್ಯಾಚರ್

24. ಯಾವ ಕ್ರೀಡೆಯಲ್ಲಿನ ಸಾಧನೆಗಾಗಿ ಅರ್ಜುನ ಅಟ್ವಾಲ್ ಖ್ಯಾತರಾಗಿದ್ದಾರೆ?
ಎ. ಟೆನ್ನಿಸ್ ಬಿ. ಚೆಸ್ ಸಿ. ಗೋಲ್ಫ್ ಡಿ. ಸ್ನೂಕರ್

25. ಇವರಲ್ಲಿ ಯಾರು 20ನೇ ಶತಮಾನದಲ್ಲಿ ಬದುಕಿದ್ದ ಭಾರತದ ಮಹಾನ್ ಗಣಿತಜ್ಞ?
ಎ. ಸರ್ ಸಿ.ವಿ. ರಾಮನ್ ಬಿ. ಶ್ರೀನಿವಾಸ್ ರಾಮಾನುಜನ್
ಸಿ. ಚಂದ್ರಶೇಖರ ಸುಬ್ರಮಣ್ಯಮ್
ಡಿ. ಜಯಂತ ನಾರ್ಳೀಕರ್

26. ಭಾರತದಲ್ಲೇ ತಯಾರಾದ, ಭಾರತದ ಪ್ರಮುಖ ಯುದ್ಧ ಟ್ಯಾಂಕ್‌ನ ಹೆಸರು
ಎ. ಭೀಮ ಬಿ. ಪೃಥ್ವಿ ಸಿ. ಅರ್ಜುನ್ ಡಿ. ಬ್ರಹ್ಮೋಸ್

27. ಈ ಕೆಳಗಿನವರಲ್ಲಿ ಯಾರು ಖ್ಯಾತ ಯಕ್ಷಗಾನ ಕಲಾವಿದರು?
ಎ. ಕಯ್ಯಾರ ಕಿಞ್ಞಣ್ಣರೈ ಬಿ. ಕೆರೆಮನೆ ಶಂಭು ಹೆಗಡೆ
ಸಿ. ಪ್ರಕಾಶ ರೈ ಡಿ. ಗುರು ಕಿರಣ

28. ಕರ್ನಾಟಕದ ಜನಪ್ರಿಯ ಜಾನಪದ ನೃತ್ಯಶೈಲಿಯ 'ಡೊಳ್ಳು ಕುಣಿತ'ವನ್ನು ಯಾವ ದೇವತೆಯ ಸುತ್ತ (ಬಗ್ಗೆ / ಕುರಿತು) ಹೆಣೆಯ (ರಚಿಸ)ಲಾಗಿದೆ?
ಎ. ಭಗವಾನ್ ವಿಷ್ಣು ಬಿ. ಬೀರೇಶ್ವರ
ಸಿ. ಮಾರಮ್ಮ ಡಿ. ಅಣ್ಣಮ್ಮ

29. ಈ ಕೆಳಕಾಣಿಸಿದ ಕ್ರಿಯೆಗಳಲ್ಲಿ ಯಾವುದರಲ್ಲಿ ಉಷ್ಣ ಬಿಡುಗಡೆಯಾಗುವುದು?
ಎ. ಮಂಜುಗಡ್ಡೆ ಕರಗುವಾಗ
ಬಿ. ಅನಿಲ ಸಾಂದ್ರಗೊಳ್ಳುವಾಗ
ಸಿ. ನೀರು ಕುದಿಯುತ್ತಿರುವಾಗ
ಡಿ. ನೀರಿನ ಉಷ್ಣತೆಯನ್ನು ಹೆಚ್ಚಿಸಿದಾಗ

30. ದಂತ (ಹಲ್ಲು) ಮತ್ತು ಅಸ್ಥಿ (ಮೂಳೆ)ಗೆ ಆವಶ್ಯಕವಾದ ಖನಿಜಗಳು
ಎ. ಕ್ಯಾಲ್ಸಿಯಂ ಮತ್ತು ಸೋಡಿಯಂ
ಬಿ. ಕ್ಯಾಲ್ಸಿಯಂ ಮತ್ತು ಪೊಟಾಸಿಯಂ
ಸಿ. ಕ್ಯಾಲ್ಸಿಯಂ ಮತ್ತು ಫಾಸ್ಫರಸ್ (ರಂಜಕ)
ಡಿ. ಕ್ಯಾಲ್ಸಿಯಂ ಮತ್ತು ಕಬ್ಬಿಣ

31. ಇವರಲ್ಲಿ ಯಾರ ಹೆಸರಿನೊಂದಿಗೆ 'ಪೌನಾರ್ ಆಶ್ರಮ' ಸೇರಿಕೊಂಡಿದೆ?
ಎ. ಮಹಾತ್ಮ ಗಾಂಧೀಜಿ ಬಿ. ಅರವಿಂದರು
ಸಿ. ವಿನೋಭಾ ಭಾವೆ ಡಿ.ರವಿಶಂಕರ್

32. 'ಈಡನ್ ಗಾರ್ಡನ್ಸ್' ಕ್ರೀಡಾಂಗಣ ಇಲ್ಲಿದೆ
ಎ. ಕೋಲ್ಕತ್ತ ಬಿ. ನವದೆಹಲಿ ಸಿ. ಮುಂಬೈ ಡಿ. ಚೆನ್ನೈ

33. ಇವುಗಳಲ್ಲಿ ಯಾವುದು ರಕ್ತ ಹೆಪ್ಪುಗಟ್ಟುವಿಕೆಗೆ ಅತ್ಯವಶ್ಯ ?
ಎ. ಕೆಂಪು ರಕ್ತ ಕಣ (ಆರ್.ಬಿ.ಸಿ)ಗಳು
ಬಿ. ರಕ್ತ ಕಣ (ಡಬ್ಲ್ಯು.ಬಿ.ಸಿ)
ಸಿ. ಲಿಫೈಸೈಟ್‌ಗಳು ಡಿ. ರಕ್ತದ ಪ್ಲೇಟ್‌ಲೆಟ್‌ಗಳು

34. ಇವುಗಳಲ್ಲಿ ಯಾವುದು ಪ್ರಾಥಮಿಕ ವರ್ಣ (ಬಣ್ಣ)ಗಳು?
ಎ. ಕೆಂಪು, ಹಸಿರು, ನೀಲಿ ಬಿ. ಕೆಂಪು, ಹಳದಿ, ನೀಲಿ
ಸಿ. ಹಳದಿ, ನೀಲಿ, ಹಸಿರು ಡಿ. ಹಳದಿ, ಹಸಿರು, ಕೆಂಪು

35. ಇವುಗಳಲ್ಲಿ ಯಾವುದಕ್ಕೆ ಆಪ್ಟಿಕಲ್ ಫೈಬರ್‌ಗಳನ್ನು ಬಳಸುತ್ತಾರೆ?
ಎ. ನೇಯ್ಗೆ ಬಿ. ಸಂಪರ್ಕ
ಸಿ. ಸಂಗೀತೋಪಕರಣಗಳು ಡಿ. ಕಣ್ಣಿನ ಶಸ್ತ್ರಕ್ರಿಯೆ

36. ಇವುಗಳನ್ನು ಹೊಂದಿಸಿ.
ಅ. ಎಪಿಕಲ್ಚರ್ 1. ದ್ರಾಕ್ಷಿಬಳ್ಳಿ

ಆ. ಸಿಲ್ವಿಕಲ್ಚರ್ 2. ಮೀನು
ಸಿ. ವಿಟಿಕಲ್ಚರ್ 3. ಜೇನು
ಡಿ. ಪಿಸಿಕಲ್ಚರ್ 4. ವೃಕ್ಷಗಳು

| | ಅ | ಆ | ಇ | ಈ |
|---|---|---|---|---|
| ಎ. | 1 | 4 | 3 | 2 |
| ಬಿ. | 3 | 4 | 1 | 2 |
| ಸಿ. | 2 | 1 | 3 | 4 |
| ಡಿ. | 4 | 3 | 2 | 1 |

37. 'ಫೋರ್ತ್ ಎಸ್ಟೇಟ್' ಎಂದರೆ
ಎ. ಮಾಧ್ಯಮಗಳು ಬಿ. ಹಿಂದುಳಿದ ರಾಜ್ಯಗಳು
ಸಿ. ನ್ಯಾಯಾಂಗ ಡಿ. ಟೀ ಎಸ್ಟೇಟ್ (ತೋಟ)

38. ಇವುಗಳಲ್ಲಿ ಯಾವುದು ನಾಗಾಲ್ಯಾಂಡ್ ರಾಜ್ಯದ ಅಧಿಕೃತ ಭಾಷೆ?
ಎ. ಆಂಗ್ಲ ಭಾಷೆ ಬಿ. ಹಿಂದಿ ಭಾಷೆ
ಸಿ. ಅಸ್ಸಾಮಿ ಭಾಷೆ ಡಿ. ನಾಗಾ ಭಾಷೆ

39. ಈ ಸರಣಿಯ ಮುಂದಿನ ಸಂಖ್ಯೆಯನ್ನು ಬರೆಯಿರಿ
14, 16, 13, 17, 12, 18, 11..............
ಎ. 12 ಬಿ. 19 ಸಿ. 22 ಡಿ. 14

40. ಇವುಗಳಲ್ಲಿ ಯಾವುದಕ್ಕೆ 'ಕಪ್ಪು ಪೆಟ್ಟಿಗೆ' (ಬ್ಲ್ಯಾಕ್ ಬಾಕ್ಸ್) ಸಂಬಂಧಿಸಿದೆ?
ಎ. ಸಿನಿಮಾ – ಚಲನಚಿತ್ರ ಬಿ. ವಿಮಾನ
ಸಿ. ಉಪಗ್ರಹ ಡಿ. ಛಾಯಾಗ್ರಹಣ

41. ಈಗಿನ ಮುಖ್ಯ ಚುನಾವಣಾ ಆಯುಕ್ತರು ಯಾರು? (2011ರಲ್ಲಿ ಈ ಪರೀಕ್ಷೆ ನಡೆದಾಗ)
ಎ. ನವೀನ್ ಚಾವ್ಲಾ ಬಿ. ಎಸ್.ವೈ. ಖುರೇಷಿ
ಸಿ. ಎನ್. ಗೋಪಾಲಸ್ವಾಮಿ ಡಿ. ಸುಧಾಕರ ರಾವ್

42. ತೆಂಜಿಂಗ್ ನಾರ್ಗೆ ಮತ್ತು ಸರ್ ಎಡ್ಮಂಡ್ ಹಿಲರಿ ಇವರು ಮೌಂಟ್ ಎವರೆಸ್ಟ್ (ಗೌರಿಶಂಕರ) ಶಿಖರವನ್ನು ಏರಿದ (ಜನಿಸಿದ) ವರ್ಷ
ಎ. 1965 ಬಿ. 1954 ಸಿ. 1953 ಡಿ. 1966

43. ಯಾವ ದೇಶವು 2010ರ ವಿಶ್ವಕಪ್ ಫುಟ್ಬಾಲ್‌ನಲ್ಲಿ ಜಯಗಳಿಸಿದೆ?
ಎ. ಸ್ಪೆಯ್ನ್ ಬಿ. ಇಟಲಿ
ಸಿ. ನೆದರ್‌ಲ್ಯಾಂಡ್ಸ್ ಡಿ. ಬ್ರಾಜಿಲ್

44. ವಿಶ್ವಸಂಸ್ಥೆ (ಯು.ಎನ್.ಓ) ಅಸ್ತಿತ್ವಕ್ಕೆ ಬಂದ ವರ್ಷ
ಎ. 1943 ಬಿ. 1944 ಸಿ. 1945 ಡಿ. 1946

45. ಕ್ರಿಕೆಟ್ ಅಂಗಳದ (ಪಿಚ್‌ನ) ಉದ್ದವೆಷ್ಟು ?
ಎ. 21 ಗಜಗಳು ಬಿ. 20 ಗಜಗಳು
ಸಿ. 22 ಗಜಗಳು ಡಿ. 25 ಗಜಗಳು

46. ಇವುಗಳಲ್ಲಿ ಯಾವುದರೊಂದಿಗೆ ಡಾ|| ಪ್ರಮೋದ್ ಕರಣ್ ಸೇಠಿ ಗುರುತಿಸಲ್ಪಡುತ್ತಾರೆ?
ಎ. ಜಯಪುರ ಕಾಲು (ಪಾದ) ಬಿ.ಹೃದಯದ ಶಸ್ತ್ರ ಚಿಕಿತ್ಸೆ
ಸಿ. ಖಭೌತ ಶಾಸ್ತ್ರ ಡಿ. ನರ ವಿಜ್ಞಾನ

47. ಸಂಕೇತ ಭಾಷೆಯಲ್ಲಿ ಏ ಪಿ ಪಿ ಏ ಆರ್ ಎನ್ನುವ ಪದವನ್ನು ಪಿ ಏ ಇ ಪಿ ಆರ್ ಏ ಎಂದು ಬರೆಯಲಾಗಿದೆ. ಆಗ ಪಿ ಆರ್ ಓ ವಿ ಐ ಡಿ ಇ ಎನ್ ಸಿ ಇ ಎನ್ನುವ ಪದವನ್ನು ಹೀಗೆ ಬರೆಯಬೇಕಾಗುವುದು (ಸಂಕೇತಗೊಳಿಸಬೇಕಾಗುವುದು)
ಎ. ಪಿ ಓ ಆರ್ ಐ ವಿ ಇ ಡಿ ಸಿ ಎನ್ ಇ
ಬಿ. ಆರ್ ಪಿ ಓ ವಿ ಪಿ ಐ ಎನ್ ಇ ಸಿ ಇ
ಸಿ. ಆರ್ ಪಿ ವಿ ಓ ಡಿ ಐ ಎನ್ ಇ ಇ ಸಿ
ಡಿ. ಇ ಓ ಆರ್ ಐ ವಿ ಇ ಡಿ ಸಿ ಇ ಪಿ

48. ಮಹಾಭಾರತ ಮಹಾಕಾವ್ಯದಲ್ಲಿ ಭೀಷ್ಮನ ಮುಂಚಿನ (ಪೂರ್ವದ) ಹೆಸರೇನಾಗಿತ್ತು ?
ಎ. ದೇವದತ್ತ ಬಿ. ದೇವವ್ರತ
ಸಿ. ದೇವ ಸಿಂಹ ಡಿ. ದೇವವರ್ಮ

49. ಎಲ್ಲ ಆಮ್ಲಗಳಿಗೂ ಸಾಮಾನ್ಯವಾಗಿರುವ ಮೂಲ ವಸ್ತು
ಎ. ಇಂಗಾಲ ಬಿ. ಜಲಜನಕ
ಸಿ. ಆಮ್ಲಜನಕ ಡಿ. ಗಂಧಕ

50. ಈ ಕೆಳಗಿನ ಮೊಘಲ್ ದೊರೆಗಳಲ್ಲಿ ಯಾರು ಅನಕ್ಷರಸ್ಥರೆಂದು ತಿಳಿಯಲಾಗಿದೆ?
ಎ. ಬಾಬರ್ ಬಿ. ಹುಮಾಯೂನ್
ಸಿ. ಅಕ್ಬರ್ ಡಿ. ಜಹಾಂಗೀರ್

51. 'ಹಿಜ್ರಾ' ಶಕವನ್ನು ಯಾವಾಗಿನಿಂದ ಪರಿಗಣಿಸಲಾಗುತ್ತದೆ?
ಎ. ಕ್ರಿ.ಶ. 632 ಬಿ. ಕ್ರಿ.ಶ. 712
ಸಿ. ಕ್ರಿ.ಶ. 722 ಡಿ. ಕ್ರಿ.ಶ. 622

52. ಇವುಗಳಲ್ಲಿ ಯಾವುದನ್ನು ಸಂವಿಧಾನದ ಕೇಂದ್ರ ಪಟ್ಟಿ ಒಳಗೊಂಡಿಲ್ಲ?
ಎ. ಅರಣ್ಯ ಬಿ. ರಕ್ಷಣೆ ಸಿ. ಅರ್ಥ (ವಿತ್ತ) ಡಿ. ರೈಲ್ವೇ

53. ಸಂವಿಧಾನದ ನಿರ್ದೇಶಕ ತತ್ವಗಳಿಗೆ ಸಂಬಂಧಿಸಿದಂತೆ ಇವುಗಳಲ್ಲಿ ಯಾವುದು ನಿಜವಲ್ಲ?
ಎ. ಭಾರತದ ಸಂವಿಧಾನದ ಭಾಗ 4ರಲ್ಲಿ ಅಳವಡಿಸಲ್ಪಟ್ಟಿವೆ
ಬಿ. ಐರ್ಲೆಂಡಿನ ಸಂವಿಧಾನದಿಂದ ಪ್ರೇರಣೆ ಪಡೆದಿದೆ
ಸಿ. ನ್ಯಾಯಾಂಗದ ಮೂಲಕ ಸಮರ್ಥಿಸಲಾಗದ ಜನರ (ನಾಗರಿಕರ) ಹಕ್ಕುಗಳೆಂದು ತಿಳಿಯಲಾಗಿದೆ
ಡಿ. ರಚನೆಯಾದ ನಂತರ ಅವುಗಳನ್ನು ತಿದ್ದುಪಡಿ ಮಾಡಲಾಗಿಲ್ಲ

54. ಇವುಗಳಲ್ಲಿ ಯಾವುದು ಪಂಚಾಯತ್ ರಾಜ್ ಸಂಸ್ಥೆಯಲ್ಲ?
ಎ. ಗ್ರಾಮ ಸಭಾ ಬಿ. ಗ್ರಾಮ ಪಂಚಾಯತ್

ಸಿ. ನ್ಯಾಯ ಪಂಚಾಯತ್ ಡಿ. ಗ್ರಾಮ ಸಹಕಾರ ಸಂಘ

55. 2012ರ ಒಲಿಂಪಿಕ್ ಕ್ರೀಡಾ ಕೂಟವನ್ನು ನಡೆಸಲು ನಿರ್ಧರಿಸಲಾಗಿರುವ ಸ್ಥಳ ಯಾವುದು?
ಎ. ಲಂಡನ್ ಬಿ. ದೆಹಲಿ ಸಿ. ಬೀಜಿಂಗ್ ಡಿ. ಪ್ಯಾರಿಸ್

56. ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರು ಯಾರು? (2011ರಲ್ಲಿ ಈ ಪರೀಕ್ಷೆ ನಡೆದಾಗ)
ಎ. ನ್ಯಾಯಮೂರ್ತಿ ವೈ.ಕೆ. ಸಭರ್‌ವಾಲ್
ಬಿ. ನ್ಯಾಯಮೂರ್ತಿ ಜೆ.ಎಸ್. ವರ್ಮಾ
ಸಿ. ನ್ಯಾಯಮೂರ್ತಿ ಆರ್.ಎಸ್. ಲಾಹೋಟಿ
ಡಿ. ನ್ಯಾಯಮೂರ್ತಿ ಕೆ.ಜಿ. ಬಾಲಕೃಷ್ಣನ್

57. ಭಾರತದ ಪಾರ್ಲಿಮೆಂಟ್ ಇವುಗಳನ್ನೊಳಗೊಂಡಿದೆ
ಎ. ರಾಷ್ಟ್ರಪತಿ, ಲೋಕಸಭೆ, ರಾಜ್ಯಸಭೆ ಬಿ. ಲೋಕ ಸಭೆ
ಸಿ. ರಾಜ್ಯ ಸಭೆ ಡಿ. ಲೋಕ ಸಭೆ ಮತ್ತು ರಾಜ್ಯ ಸಭೆ

58. ಭಾರತ ನೌಕಾಪಡೆಯ ಮುಖ್ಯಸ್ಥರನ್ನು ಹೀಗೆಂದು ಕರೆಯುತ್ತಾರೆ?
ಎ. ಬ್ರಿಗೇಡಿಯರ್ ಬಿ. ಜನರಲ್
ಸಿ. ಅಡ್ಮಿರಲ್ ಡಿ. ಏರ್ ಚೀಫ್ ಮಾರ್ಷಲ್

59. 'ಸೀ ಬರ್ಡ್' ನೌಕಾ ನೆಲೆ ಇಲ್ಲಿದೆ
ಎ. ಕೊಚ್ಚಿನ್ ಬಿ. ಕಾರವಾರ
ಸಿ. ವಿಶಾಖ ಪಟ್ಟಣ ಡಿ. ಪಾಂಡಿಚೇರಿ

60. ಗಾಂಧೀಜಿಯನ್ನು 'ಮಹಾತ್ಮ' ಎಂದು ಪ್ರಥಮ ಬಾರಿಗೆ ಕರೆದದ್ದು ಯಾರು?
ಎ. ಲೋಕಮಾನ್ಯ ತಿಲಕರು ಬಿ. ಗೋಪಾಲ ಕೃಷ್ಣ ಗೋಖಲೆ
ಸಿ. ಜವಾಹರಲಾಲ್ ನೆಹರು ಡಿ. ರವೀಂದ್ರನಾಥ ಠ್ಯಾಗೋರ್

61. ಟೆಸ್ಟ್ ಕ್ರಿಕೆಟ್‌ನಲ್ಲಿ ವೈಯಕ್ತಿಕ ಗರಿಷ್ಠ ಮೊತ್ತದ (ಸ್ಕೋರ್) ದಾಖಲೆ ಯಾರ ಹೆಸರಿನಲ್ಲಿದೆ?
ಎ. ಸಚಿನ್ ತೆಂಡೂಲ್ಕರ್ ಬಿ. ಗ್ಯಾರಿ ಸೋಬರ್
ಸಿ. ಬ್ರಿಯಾನ್ ಲಾರಾ ಡಿ. ವೀರೇಂದ್ರ ಸೆಹವಾಗ್

62. ಜಲಾಂತರ್ಗಾಮಿಯೊಳಗಿಂದ ಸಮುದ್ರ ಮೇಲ್ಮೈಯಲ್ಲಿರುವ ವಸ್ತುಗಳನ್ನು ವೀಕ್ಷಿಸಲು ಬಳಸುವ ಉಪಕರಣ ಯಾವುದು?
ಎ. ಸೂಕ್ಷ್ಮದರ್ಶಕ (ಮೈಕ್ರೋಸ್ಕೋಪ್)
ಬಿ. ದೂರದರ್ಶಕ (ಟೆಲಿಸ್ಕೋಪ್)
ಸಿ. ಪೆರಿಸ್ಕೋಪ್ ಡಿ. ಎಲೆಕ್ಟ್ರೋಸ್ಕೋಪ್

63. ಮಲ್ಲಯುದ್ಧದ (ಕುಸ್ತಿಯಲ್ಲಿ) ವಿಶ್ವ ಚಾಂಪಿಯನ್ ಶಿಪ್‌ನಲ್ಲಿ ಬಂಗಾರದ ಪದಕ ಗಳಿಸಿದ ಪ್ರಥಮ ಭಾರತೀಯ ಕುಸ್ತಿಪಟು
ಎ. ದಾರಾಸಿಂಗ್ ಬಿ. ಸತ್ಪಾಲ್ ಸಿಂಗ್
ಸಿ. ಸುಶೀಲ್ ಕುಮಾರ್ ಡಿ. ವಿಜೇಂದರ್ ಸಿಂಗ್

64. 2010ರಲ್ಲಿ ರಾಜ್ಯಸಭೆಗೆ ನಾಮ ನಿರ್ದೇಶನ ಮಾಡಲ್ಪಟ್ಟ ಕರ್ನಾಟಕದ ಜನಪ್ರಿಯ ಸಿನಿಮಾ ಮತ್ತು ರಂಗಕರ್ಮಿ ಇವರಲ್ಲಿ ಯಾರು?
ಎ. ಉಮಾಶ್ರೀ ಬಿ. ಬಿ. ಸರೋಜಾದೇವಿ
ಸಿ. ಜಯಶ್ರೀ ಡಿ. ಜಯಮಾಲಾ

65. ಯಾವ ನದಿಗೆ 'ಹಿರಾಕುಡ್' ಅಣೆಕಟ್ಟನ್ನು ಕಟ್ಟಲಾಗಿದೆ?
ಎ. ನರ್ಮದಾ ಬಿ. ಮಹಾನದಿ ಸಿ. ಗೋದಾವರಿ ಡಿ. ಕೃಷ್ಣಾ

66. ಯಾವ ಪಂಚವಾರ್ಷಿಕ ಯೋಜನೆಯಲ್ಲಿ ಔದ್ಯೋಗಿಕ ಕ್ಷೇತ್ರಕ್ಕೆ ಹೆಚ್ಚಿನ ಆದ್ಯತೆ ನೀಡಲಾಗಿದೆ?
ಎ. ಎರಡನೇ ಪಂಚವಾರ್ಷಿಕ ಯೋಜನೆ
ಬಿ. ಮೂರನೇ ಪಂಚವಾರ್ಷಿಕ ಯೋಜನೆ
ಸಿ. ನಾಲ್ಕನೇ ಪಂಚವಾರ್ಷಿಕ ಯೋಜನೆ
ಡಿ. ಆರನೇ ಪಂಚವಾರ್ಷಿಕ ಯೋಜನೆ

67. ಗಂಟೆಗೆ 30 ಮೈಲಿ ವೇಗದಲ್ಲಿ ಓಡುತ್ತಿರುವ ರೈಲೊಂದು ಗಂಟೆಗೆ 50 ಮೈಲಿ ವೇಗದಲ್ಲಿ ಓಡುತ್ತಿರುವ ರೈಲಿಗಿಂತ ಮುಂದೆ ಇದೆ. ಇವುಗಳಲ್ಲಿ ವೇಗವಾಗಿ ಓಡುತ್ತಿರುವ ರೈಲಿಗೆ ನಿಧಾನವಾಗಿ ಓಡುತ್ತಿರುವ ರೈಲನ್ನು ಹಿಡಿಯಲು / ಸಮೀಪಿಸಲು ಒಂದು ವೇಳೆ 15 ನಿಮಿಷಗಳು ಬೇಕಾಗುವುದಾದರೆ, ಅವೆರಡೂ ರೈಲುಗಳು ಪರಸ್ಪರ ಎಷ್ಟು ದೂರದಲ್ಲಿದೆ?
ಎ. 5 ಮೈಲಿಗಳು ಬಿ. 20 ಮೈಲಿಗಳು
ಸಿ. 10 ಮೈಲಿಗಳು ಡಿ. 15 ಮೈಲಿಗಳು

68. ಜವಾಹರ್ ರೋಜಗಾರ್ ಯೋಜನೆಯ ಉದ್ದೇಶ
ಎ. ಗ್ರಾಮೀಣ ಜನರಿಗೆ ವಸತಿಗಳನ್ನು ಕಲ್ಪಿಸುವುದು
ಬಿ. ಮಕ್ಕಳಿಗೆ ಶಿಕ್ಷಣ ಕಲ್ಪಿಸುವುದು
ಸಿ. ಗ್ರಾಮೀಣ ಜನರಿಗೆ ಕೆಲಸ ದೊರೆಯುವಂತೆ ಮಾಡುವುದು
ಡಿ. ಕೃಷಿ ಉತ್ಪಾದನೆಯನ್ನು ಹೆಚ್ಚಿಸುವುದು

69. ಮೊದಲನೆಯ ಮಹಾಯುದ್ಧವನ್ನು ಯಾವ ಒಪ್ಪಂದವು ಔಪಚಾರಿಕವಾಗಿ ಮುಕ್ತಾಯಗೊಳಿಸಿತು?
ಎ. ವರ್ಸೇಲ್ ಒಪ್ಪಂದ ಬಿ. ಪ್ಯಾರಿಸ್ ಒಪ್ಪಂದ
ಸಿ. ವಾಷಿಂಗ್ಟನ್ ಒಪ್ಪಂದ ಡಿ. ಲಂಡನ್ ಒಪ್ಪಂದ

70. ಇವುಗಳಲ್ಲಿ ಯಾವುದಕ್ಕೆ ಕ್ಯೂಟೋ ಪ್ರೊಟೋಕೊಲ್ ಸಂಬಂಧಿಸಿದೆ?
ಎ. ಇಂಧನಕ್ಕೆ ಸರಿಯಾದ ಮಾರುಕಟ್ಟೆ ದರ ಸಿಗುವಂತೆ ಮಾಡಲು
ಬಿ. ಲ್ಯಾಂಡ್ ಮೈನ್ (ನೆಲ ಸ್ಫೋಟಕ)ಗಳ ಬಳಕೆಯನ್ನು ಕಡಿಮೆ ಮಾಡಲು
ಸಿ. ಅಳಿವಿನಂಚಿನಲ್ಲಿರುವ ಪ್ರಾಣಿಗಳ ಸಂತತಿಯನ್ನು ರಕ್ಷಿಸುವ ಬಗ್ಗೆ
ಡಿ. ಹಸಿರುಮನೆ - ಗ್ರೀನ್‌ಹೌಸ್ - ಪರಿಣಾಮವನ್ನುಂಟು ಮಾಡುವ ಅನಿಲಗಳನ್ನು ಕಡಿಮೆ ಮಾಡುವ ಬಗ್ಗೆ